ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 27.3.2000ದ ಸೋಮವಾರದಂದು ಪ್ರಶ್ನೋತ್ತರ ಇಲ್ಲದಿದ್ದ ಕಾರಣ 6ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 8 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 218 ಪ್ರಶ್ನೆಗಳ ಪೈಕಿ 155 ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಯನ್ನು ಬಳಸಿ ವಿದ್ಯುತ್ ಉತ್ಪಾದನೆ

723 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಬಸಪ್ಪನ ಗುಡಿಯ ಹತ್ತಿರ ಇರುವ ಗಾಳಿ ವೇಗ ಎಷ್ಟು?

ಆ) ಈ ಪ್ರದೇಶದಲ್ಲಿ ವೇಗದ ಗಾಳಿಯನ್ನು ಬಳಸಿ ಎಷ್ಟು ವಿದ್ಯುತ್ ಉತ್ಪಾದನೆ ಮಾಡಬಹುದು, ಇಲ್ಲಿಯವರೆಗೆ ಎಷ್ಟು ವಿದ್ಯುತ್ ಉತ್ಪಾದನೆಗೆ ಮಂಜೂರಾತಿ ನೀಡಲಾಗಿದೆ. ಅವು ಯಾವ ಹಂತದಲ್ಲಿದೆ, ಸಂಪೂರ್ಣ ವಿವರಗಳನ್ನು ನೀಡುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಬಸಪ್ಪನ ಗುಡಿ ಹತ್ತಿರ ಇರುವ ಗಾಳಿಯ ವೇಗದ ಪ್ರಮಾಣ ವಾರ್ಷಿಕ ಸರಾಸರಿ ಪ್ರತಿ ಗಂಟೆಗೆ 27 ಕಿ.ಮೀ. ದಿಂದ 29 ಕಿ.ಮೀ. ಇದ್ದು, ಗಾಳಿಯ ಸಾಂದ್ರತೆ ಪ್ರತಿ ಚದುರ ಮೀಟರ್‌ಗೆ ಸುಮಾರು 350 ರಿಂದ 400 ವ್ಯಾಟ್ಸ್ ಇರುತ್ತದೆ.

ಆ) ಈ ಪ್ರದೇಶದಲ್ಲಿ ವೇಗದಗಾಳಿಯನ್ನು ಬಳಸಿ 30 ಮೆ. ವ್ಯಾ. ಸಾಮರ್ಥ್ಯದ ಗಾಳಿಶಕ್ತಿಯ ವಿದ್ಯುತ್ ಘಟಕ ಸ್ಥಾಪಿಸಿ ಪ್ರತಿ ವರ್ಷ 60 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಮಾರ್ಚ್ 2000 ಇಸವಿಯವರೆಗೆ ಈ ಪ್ರದೇಶದಲ್ಲಿ ಕೆ.ಪಿ.ಸಿ.ಎಲ್. ನ್ನೊಳಗೊಂಡು ಒಟ್ಟು 5 ಕಂಪನಿಗಳಿಗೆ 26.5 ಮೆ. ವ್ಯಾ. ಸಾಮರ್ಥ್ಯದ ಗಾಳಿ ಶಕ್ತಿ ಘಟಕಗಳನ್ನು ಸ್ಥಾಪಿಸಲು ಈ ಕೆಳಕಂಡ ಸಂಸ್ಥೆಗಳಿಗೆ ಅನುಮತಿ ನೀಡಿರುತ್ತದೆ.

1.	ಕರ್ನಾಟಕ ವಿದ್ಯುತ್ ನಿಗಮ ನಿ	-	4.5 ಮೆ.ವ್ಯಾ
2.	ವಿಕ್ಟರಿ ಗ್ಲಾಸ್ ಆ್ಯಂಡ್ ಇಂಡಸ್ಟ್ರೀಸ್	-	2.0 ಮೆ.ವ್ಯಾ
3.	ಇಂಡೊವಿಂಡ್ ಎನರ್ಜಿ ಲಿ.	-	5.0 ಮೆ.ವ್ಯಾ
4.	ಗದಗ ಕೋ - ಆ ಇಂಡಸ್ಟ್ರೀಸ್ ಲಿ	-	5.0 ಮೆ.ವ್ಯಾ
5.	ಸುಭಾಷ್ ಪ್ರೊಜೆಕ್ಟ್ಸ್ ಆ್ಯಂಡ್ ಮಾರ್ಕೆಟಿಂಗ್ ಲಿ.	-	10.0 ಮೆ.ವ್ಯಾ

ಈ ಕೆಳಗೆ ಸೂಚಿಸಲಾದ ಸಂಸ್ಥೆಗಳು ಗಾಳಿಶಕ್ತಿಯ ಘಟಕವನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದಿಸುತ್ತಿರುತ್ತೇವೆ.

	ಕಂಪನಿ		ಸಾಮರ್ಥ್ಯ ಮೆ.ವ್ಯಾ.
1.	ಕರ್ನಾಟಕ ವಿದ್ಯುತ್ ನಿಗಮ ನಿ.	-	2.025
2.	ವಿಕ್ಟರಿ ಗ್ಲಾಸ್ ಆ್ಯಂಡ್ ಇಂಡಸ್ಟ್ರೀಸ್	-	1.800
3.	ಇಂಡೊವಿಂಡ್ ಎನರ್ಜಿ ಲಿ.	-	4.100
	ಒಟ್ಟು	-	**7.925**

ರಾಷ್ಟ್ರೀಯ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸಿದವರಿಗೆ ಇನ್ಸೆಂಟಿವ್

724 - ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ಉಳಿತಾಯ ಮುಜರಾಯಿ ಮತ್ತು ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆ (ಎನ್.ಎಸ್.ಸಿ) ಗಳಲ್ಲಿ ಹಣ ತೊಡಗಿಸಿದವರಿಗೆ ಸಣ್ಣ ಉಳಿತಾಯ ಇಲಾಖೆ ಶೇಕಡ 2ರಷ್ಟು ಹಣವನ್ನು ಇನ್‌ಸೆಂಟಿವ್ ಎಂದು ನೀಡಿರುವುದಾಗಿ ಪ್ರಕಟಿಸಿದ್ದುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ರೀತಿ ಹಣ ತೊಡಗಿಸಿದವರಿಗೆ ಇಲ್ಲಿಯವರೆಗೆ ಇನ್ಸೆಂಟಿವ್ ಹಣವನ್ನು ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಾಬುರಾವ್ ಚುಂಚನ ಸೂರ್ (ಸಣ್ಣ ಉಳಿತಾಯ, ಮುಜರಾಯಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಹೌದು. ಸಣ್ಣ ಉಳಿತಾಯದ ಅರ್ಹ ಠೇವಣಿಗಳಲ್ಲಿ ವಿನಿಯೋಗಿಸಿದ ಮೊತ್ತಕ್ಕೆ ಶೇಕಡ 2 ಶೇಕಡ 5ರಷ್ಟು ಹಣವನ್ನು ಇನ್ಸೆಂಟಿವ್ ಎಂದು ನೀಡುವುದಾಗಿ ಪ್ರಕಟಿಸಿದೆ.

ಆ) 1996-97ನೇ ಸಾಲಿನಲ್ಲಿ ಅರ್ಹ ಠೇವಣಿಗಳಲ್ಲಿ ವಿನಿಯೋಗಿಸಿದ ಮೊತ್ತಕ್ಕೆ ಸಣ್ಣ ಉಳಿತಾಯ ಕಛೇರಿಗಳಲ್ಲಿ ಬಂದ ಎಲ್ಲಾ ಕ್ಲೈಂಗಳಿಗೂ ಇನ್ಸೆಂಟಿವ್ ಹಣವನ್ನು ಪಾವತಿಸಲಾಗಿದೆ.

ಸ್ವಾತಂತ್ರ್ಯೋಧರ ಪಿಂಚಣಿ ಪ್ರಕರಣಗಳಲ್ಲಿ ಬಾಕಿ

727 - ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಾಕಿ ಬರುವ ಸ್ವಾತಂತ್ರ್ಯ ಯೋಧರ ಪ್ರಕರಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)